ಏನು ಅಂತ ತಲೆ ಕೆಡಿಸ್ಕೊಂಡು ಕೂತಿದೀನಿ' ಅಂದ ಭೀಮರಾವ್ ಕಡೆ ನೋಡಿ, ಆ ಕ್ಷಣದಲ್ಲೂ ಆತನ ವ್ಯಂಗ್ಯದ ಛಾಟಿಗೆ ನಗು ತಡೆದುಕೊಂಡೆ. ನಡುವೆ 'ಹಾಳಾದೋಳು ಹೋದ್ಲು. ಸುಮ್ಮನಾದ್ರೂ ಇರಬಾರದೆ? ದಿನವೂ ನನ್ನನ್ನು ಮರೆತುಬಿಡಿ ಅಂತ ಆ ಕಿತ್ತೋಗಿರೊ ಮೊಬೈಲ್‌ನಲ್ಲಿ ಬಡ್ಕೊಳ್ಳೋದು, ಈ ಹಿಂಸೆ ಯಾರಿಗಾಗುತ್ತೆ ಹೇಳಿ?' ಎಂದರು.

ಕ್ಷಣ ಕೂತು, 'ಈಗ ಮನೆ ಸ್ಥಿತಿ ಸುಧಾರಿಸ್ಲಿ. ಆಫೀಸ್ ಕಡೆ ಬರೋದು ಬೇಡ' ಅಂದು ಹೊರಬಿದ್ದೆ.

ನನ್ನ ಮೊಬೈಲ್ ಮೆಸೇಜ್ ತಂದಿತ್ತು. 'ಐ ಲೈಕ್ ಯುವರ್ ರೈಟಿಂಗ್, ಪ್ಲೀಸ್ ಕೆನ್ ಐ ಕಾಲ್ ಯೂ.'

ಯಾರಿದು? ಪರಿಚಯವಿಲ್ಲ. ಮೆಸೇಜ್ ತಳ್ಳಿ ಕೆಲಸದತ್ತ ಹೊರಟೆ.

ರಾತ್ರಿ ಮೊಬೈಲ್ ಸಂದೇಶ.

'ಯುವರ್ ಡಿಪಿ ಈಸ್ ಸೋ ಬ್ಯೂಟಿಫುಲ್... ಕೆನ್ ಐ ಕಾಲ್ ಯು ಪ್ಲೀಸ್.'

ಬೇರೆ ದೇಶದ ನಂಬರ್! ಯಾರೋ ಮಾಡಕ್ಕೆ ಕೆಲಸವಿಲ್ಲ. ಚಳಿಗೆ ಬೆಚ್ಚಗೆ ಹೊದ್ದು ಮಲಗಿದೆ. ಯಾವ ಡಿಪಿ ಇದೆ? ಓಪನ್ ಮಾಡಿದೆ.

ತಾವರೆಯ ಕಣ್ಣುಗಳು, ಬಾಗಿದ ಹುಬ್ಬು, ನೇರ ಮೂಗು, ಮಿಂಚುವ ವಜ್ರದ ಮೂಗುತಿ, ಮೊಗ್ಗಾದ ತುಟಿಗಳು... ಅಲಂಕಾರವೇ ಇಲ್ಲದ ಚೆಲುವು! ಮನ ಸ್ಮಶಾನವಾಗಿದೆ ಅನಿಸಿ ಬಿದ್ದುಕೊಂಡೆ.

ಸಂದೇಶ ಟಣ್‌ಗುಟ್ಟಿತು.

'ಈ ಸಂದೇಶ ಗಮನಿಸಿ. ನಾನು ಕೆಟ್ಟವನಲ್ಲ, ನಿಮ್ಮ ಬಗ್ಗೆ ಯೋಚಿಸಿ ಕಂಗೆಟ್ಟಿರುವೆ. ನಿಮ್ಮ ಕಾದಂಬರಿಯ 'ಅರ್ಪಣೆ' ನೋಡಿದೆ, ನಿಮ್ಮವರು ತೀರಿಕೊಂಡಿದ್ದು ತಿಳಿದು ಸಂಕಟ ಸಹಿಸಲಾಗುತ್ತಿಲ್ಲ. ನಿಮ್ಮ ಹತ್ರ ಎರಡು ಮಾತು?'



ಸುಮ್ಮನಿದ್ದೆ. 'ಬೈಕೊಬೇಡಿ ಶಾಲಿನಿಯವರೆ, ಇಲ್ಲಿ ಮಧ್ಯಾಹ್ನ...'

ಕನ್ನಡವೇ ಆಂಗ್ಲದಲ್ಲಿ, ಅಲ್ಲಿ ಚಿತ್ರ ಇರಲಿಲ್ಲ.

'ನೀವೀಗ ಆನ್‌ಲೈನ್, ಪ್ಲೀಸ್, ನಾನು ಕರೆ ಮಾಡ್ಲೆ?' — ಆ ಬೇಡಿಕೆಗೆ ಸ್ವಿಚ್ ಆಫ್ ಮಾಡಿ ಮಲಗಿದೆ.

ಬೆಳಿಗ್ಗೆಯ 'ಶುಭೋದಯ' ನೋಡಿ ಸುಮ್ಮನಾದೆ.

'ನೀವು ನಂಬಲ್ಲ? ನೋಡಿ, ನಿಮ್ಮ ಕಾದಂಬರಿ ಐದು ಸಾವಿರ ಮುದ್ರಣ!'

'ಕೇಸ್ ಹಾಕ್ ಬೇಡ್ರೀ, ಇದು ನಮ್ಮ ಕನ್ನಡಿಗರಿಗೆ...'

'ನಮ್ಮ ಭಾಷಾ ಶ್ರೀಮಂತಿಕೆ ಇಲ್ಲಿನ ಕನ್ನಡಿಗರಿಗೆ ಅರ್ಥವಾಗ್ಲಿ.'

ಅವನ ಬಗ್ಗೆ ವಾತ್ಸಲ್ಯ ಮೂಡಿ ಇಷ್ಟು ಆರಾಧನೆಯೆ... ಅನಿಸಿ ಮನ ಮೆತ್ತಗಾಯಿತು.

'ಶಾಲಿನಿಯವರೇ, ತಪ್ಪಾಗಿ ತಿಳಿಯುವುದು ಬೇಡ. ನನ್ನ ಬಯೋಡೇಟಾ — ಬಿಇ, ಎಂಇ, ಡಾಕ್ಟರೇಟ್... ಸ್ವಂತ ಕಂಪನಿಗಳ ಒಡೆತನ.'

ವಿಸ್ಮಿತಳಾದೆ! ಮಗ ಚಿರಾಗ್ ತಿಂಡಿಗೆ ಕೂಗುತ್ತಲೇ ಹೊರ ಬಂದಿದ್ದೆ.

'ಅಮ್ಮಾ, ಉಪ್ಪು ಖಾರ ಹೆಚ್ಚಾಯ್ತೆ?' ಮಾಧವಿ ಕೇಳುತ್ತಿದ್ದಾಳೆ. ಉತ್ತರಿಸಲು ತಡವರಿಸಿದೆ. ಆದರೂ ಆ ಮಗುವಿನ ಮನಕ್ಕೆ ಖುಷಿಯಾಗುವಂತೆ, 'ನೀನು ಏನು ಮಾಡಿದ್ರೂ ಚೆನ್ನಾಗಿರುತ್ತೆ ಪುಟ್ಟಿ' ಅಂದೆ.

ಸಂಜೆ ವಿಹಾರ ಹೊರಟೆ. 'ನಿಮಗೊಂದು ಸಂದೇಶ, ಏನೇ ಕಷ್ಟ ಬಂದರೂ ಎದುರಿಸಿ, ಏನೇ ಇಷ್ಟವಾಗದಿದ್ದರೂ ಇಲ್ಲಾ ಅನ್ನಿ. ಸದಾ ನಗುತ್ತಿರಿ, ಮನ ಮಗುವಿನ ಹಾಗಿರಲಿ. ಇದರ ನೀತಿ — ಸಾವು ಅನ್ನುವುದು ದೊಡ್ಡ ನಷ್ಟವೇನೂ ಅಲ್ಲ. ಆದರೆ ನೀವು ಬದುಕಿರುವಾಗಲೇ ಸತ್ತು ಹೋಗದಿರಿ. ಜೀವನದ ಆನಂದ ಅನುಭವಿಸಿ.' ಅದರತ್ತ ಕಣ್ಣು ತೂರಿದೆ.

ಅವನಿಂದಲೇ ಕರೆ! ಮನಸ್ಸು ಹೊಯ್ದಾಡಿತು. ನಿರಾಕರಿಸಲಾಗದೆ, 'ಹಲೋ...' ಅಂದೆನಷ್ಟೆ. ಅವನ ಸಂಭ್ರಮ, ರೋಮಾಂಚನ, ಕಂಪನ!

'ಶಾಲಿನಿಯವರೆ, ಸಂಜಯ್, ನಿಮ್ಮ ಅಭಿಮಾನಿ.' ಪರಿಚಯಿಸಿಕೊಂಡ.

'ಗೊತ್ತಾಗಲಿಲ್ಲ? ಆದರೂ ನಿಮ್ಮ ಅಭಿಮಾನಕ್ಕೆ ನಮನ' ಅಂದೆ.

'ರೀ, ನಾನು ನಿಮ್ಮ ಹತ್ರ ಮಾತಾಡಬೇಕು' ಅಂದ.

'ಸರಿ ಮಾತಾಡಿ. ನಿಮ್ಮ ಸಾಧನೆಗೆ ಹೆಮ್ಮೆ ಇದೆ' ಅಂದೆ.

'ನನ್ನ ಕರೆ ಸ್ವೀಕರಿಸಿ ಸಾಕು, ಕೆನಡಾದಲ್ಲಿ ಇದೀನಿ, ಇಲ್ಲಿ ಬೆಳಗಿನ ಐದುಗಂಟೆ.'

'ಆದರೆ ನನ್ನ ನಂಬರ್...?'

'ನೀವೇ ಕೊಟ್ಟಿದ್ದೀರಿ' ಅಂದು ಕರೆ ಕಟ್ ಮಾಡಿದ.

ಆ ರಾತ್ರಿ 'ಕರೆ ಸ್ವೀಕರಿಸಿ... ಇಲ್ಲಿ ಮಧ್ಯಾಹ್ನ, ಕೆನ್ ಐ ಕಾಲ್ ಯು' — ಅವನ ಮೆಸೇಜ್ ಬಂತು. ಎಚ್ಚರವಂತೂ ಆಗಿದೆ... ಅದೇನೊ ಮಾತನಾಡಲಿ ಅನಿಸಿ, 'ಎಸ್ ಕಾಲ್ ಮಿ' ಅಂದು ಮೆಸೇಜ್ ಹಾಕಿ ಕೂತೆ.

'ನನ್ನ ಮಾತಿಂದ ತೊಂದ್ರೆನಾ? ಮಾತನಾಡಲೆ?' ಸಜ್ಜನಿಕೆ ತೋರಿದ.

ಅವನ ಮೆಲು ಮಾತುಗಳು ಕೇಳುತ್ತಾ... ರಾವ್ ನೆನಪಾದರು.

ಇದೇನು ಇಷ್ಟು ಅಕ್ಕರೆ! ಇವನು ನನಗೆ ಗೊತ್ತಿಲ್ಲ. ಕಟ್ ಮಾಡಿದರೆ ಅನಿಸಿತು.

'ಸಾರಿ... ಶಾಲಿನಿ ನನ್ನ ಕಣ್ಣುಗಳು ಒದ್ದೆಯಾಗುತ್ತಿದೆ.' ಅಂದು ಬಿಕ್ಕುತ್ತಾ ಕೂತ.

'ಓ... ದೇವಾ ಇದೇನಾಗುತ್ತಿದೆ?'

'ಶಾಲಿನಿ, ಆಲ್ ಐ ವಾಂಟು ಸೇ ಈಸ್ ದಟ್ ಯು ಆರ್ ಎ ಜೆಮ್ ಅಂಡ್ ವಂಡರ್‌ಫುಲ್ ಪರ್ಸನ್. ಐ ಯಾಮ್ ವೆರಿ ಎಮೋಷನಲ್ ನೌ. ಐ ವಿಲ್ ಸ್ಟಾಪ್ ಟಾಕಿಂಗ್.' ಮತ್ತೆ ಬಿಕ್ಕಿ ಬಿಕ್ಕಿ ಅತ್ತು, 'ಐ ಯಾಮ್ ಜೆಸ್ಟ್ ಕ್ರೈಯಿಂಗ್ ಶಾಲಿನಿ. ನಿಮ್ಮ ಈ ವೈಧವ್ಯ? ಐ ಕೆನಾಟ್ ಬೇರ್ ದಿಸ್ ಲೋಡ್.' ಅವನು ನಿಟ್ಟುಸಿರೊಡನೆ ಕರೆ ಕಟ್ ಮಾಡಿದ. ಯಾವ ದೋಷವೂ ಕಾಣಲಿಲ್ಲ. ನನ್ನ ವೈಧವ್ಯಕ್ಕೆ ಅವನ ಈ ರೀತಿಯ ಸಂತಾಪ, ಕಣ್ಣೀರು, ಸಂಕಟ? ಒಡಹುಟ್ಟಿದವರಿಂದಲೇ ನಿರೀಕ್ಷಿಸಲಾರೆ! ಕಣ್ಣು ಹನಿಯಿತು. ಹಾಸಿಗೆಗೆ ಉರುಳಿಕೊಂಡೆ. ದುಃಖ ಉಕ್ಕಿತ್ತು.

ಕಾದಂಬರಿಯಲ್ಲಿ ನೋವು ತೋಡಿಕೊಂಡಿದ್ದು 'ಎರಡು ಮಾತಿನಲ್ಲಿ.' ಆದರೆ ಅವನ ರೋದನ ಮಿತಿ ಮೀರಿದ್ದು!

ಪಾಪ ಅವನಾರೊ?

ರಾವ್ ಎಲ್ಲೋ ಹತ್ತಿರಕ್ಕೆ ಬಂದು ದೂರ ಹೋದ ಭಾವ. ತಕ್ಷಣವೇ ಮೊಬೈಲ್ ಆನ್ ಮಾಡಿದೆ. 'ಗುಡ್ ನೈಟ್... ಗಾಡ್ ಹ್ಯಾಸ್ ಬ್ಲೆಸ್ಡ್ ಯೂ ವಿತ್ ವಂಡರ್‌ಫುಲ್ ಚಿಲ್ಡ್ರನ್, ವಂಡರ್‌ಫುಲ್ ನಾಲೆಡ್ಜ್, ವಂಡರ್‌ಫುಲ್ ಬ್ಯೂಟಿ, ಇಟ್ ಈಸ್ ಎ ಲೈಫ್ ಟು ಸೆಲೆಬ್ರೇಟ್ ಅಂಡ್ ಅಕಾಂಪ್ಲಿಶ್. ಮೈ ಫೋನ್ ವಿಲ್ ಆಫ್. ಡೋಂಟ್ ವರಿ ಎಬೌಟ್ ಎನಿಥಿಂಗ್. ಬಿ ಹ್ಯಾಪಿ.' ಆ ಸಂದೇಶ ಮನಸ್ಸಿಗೆ ಹಿತವಾಗಿತ್ತು.

ಒಳಗಿನ ಹಸಿ ಹಸೀ ನೋವುಗಳನ್ನು ಚೆಲ್ಲಿಕೊಳ್ಳಲು ಎಲ್ಲೂ ಅವಕಾಶವೇ ಇಲ್ಲ ಎನಿಸಿ, ಈ ಪ್ರಪಂಚದ ಮೂಲೆಯಿಂದ ಬರುವ ಆ ಅಂತಃಕರಣದ ಮಾತುಗಳು, ಸಂದೇಶಗಳು, ಅವನನ್ನು ಗೆಳೆಯನಾಗಿ ಸ್ವೀಕರಿಸಲು ಮನ ಹಂಬಲಿಸಿತು.

ನಡುವೆ ನಾಲ್ಕಾರು ದಿನ ಮೌನವೇ... ಚಡಪಡಿಸುವಂತೆ ಆಯಿತು. ಅವನು ಹೇಳಿದ್ದ — 'ನನ್ನ ಮೊಬೈಲ್ ಆಫ್ ಮಾಡಿಕೊಳ್ಳುತ್ತೇನೆಂದು.' ನಾನು ಸದಾ ಮೊಬೈಲ್ ಕಡೆ ನೋಡಿ ವಿಷಾದಿಸಿದೆ. ಹಸಿವು ನಿದ್ದೆ ಹಾರಿ ಹೋದಾಗ... ಈ ಕಾಲ ಯಾರನ್ನೂ ನಂಬುವಂತಿಲ್ಲ, ನಾನೇನೊ ನಿರ್ಧರಿಸುತ್ತಿದ್ದೆ, ಆದರೆ ಮೊಬೈಲ್ ಬೆಂಕಿಯಂತೆ ಕಾಣಿಸಿತ್ತು.

ಆ ರಾತ್ರಿ 'ಕೆನ್ ಐ ಕಾಲ್ ಯು' ಬರುತ್ತಲೇ, 'ಎಸ್ ಪ್ಲೀಸ್' ತಕ್ಷಣ ಕಳಿಸಿದೆ. 'ಕೆನ್ ಯು ಪ್ಲೀಸ್ ಕಾಲ್ ಮಿ ಬಾರೊ ಹೋಗೊ.'

ಸ್ನೇಹಾಕಾಂಕ್ಷಿ ತಪ್ಪೇನಿಲ್ಲ. 'ಹೇಳು' ಅಂದೆ. ಖುಷಿ ಪಟ್ಟ. ಕೊಲಂಬಿಯಾ ಕಾಫಿ ಪ್ಲಾಂಟೇಷನ್‌ಗೆ ಹೋಗಿದ್ದಾಗಿ, ಮೆಸೇಜ್ ಮಾಡಲೂ ಆಗಲಿಲ್ಲವೆಂದ. ತನ್ನ ತಂದೆ, ತಾಯಿ, ಅಕ್ಕ ತಂಗಿ ಅಣ್ಣಂದಿರ ಬಗ್ಗೆ ಸಾಕಷ್ಟು ಹೇಳಿದ.

ಹೂಂಗುಟ್ಟಿದೆ. 'ನಿನ್ನ ಹೆಂಡತಿ ಮಕ್ಕಳು?' ಕೇಳಿದೆ. 'ಅದೆಲ್ಲಾ ನಿರ್ಧಾರ ಆಗಲಿಲ್ಲ. ಈಗ ನಲವತ್ತೈದು' ಎಂದ. ನಾನು ಮೌನವಾದೆ.

ಸಂಜಯ್ ದಿನವೂ ಕರೆ ಮಾಡುತ್ತಿದ್ದ. 'ಏನ್ ಮಾಡ್ತಾ ಇದ್ದೀರಿ? ಊಟ ಆಯ್ತಾ?' — ಕೇಳುವಷ್ಟು ಆತ್ಮೀಯನಾದ. ಹಲವು ವಿಚಾರಗಳು ಚರ್ಚಿಸುವಷ್ಟು ಹತ್ತಿರವಾದೆವು. ಕರೆ ತೆಗೆದುಕೊಳ್ಳಲಾಗದಿದ್ದರೆ, ನಾವು ಬೇಸರ ಮಾಡಿಕೊಳ್ಳುತ್ತಿದ್ದೆವು. ಅಷ್ಟು ಸ್ನೇಹಕ್ಕೆ ಗಂಟು ಬಿದ್ದು ಗೌರವ ಕೊಟ್ಟಾಗಿತ್ತು.

ಸಂಜಯ್ ನನ್ನ ಮಾತುಗಳಿಗೆ ಸಿಕ್ಕ ಮೇಲೆ, ಹಿಡಿದಿಟ್ಟ ದುಃಖ, ನೋವು, ಭಾವುಕತೆ ಹಂಚುತ್ತಾ ಮನದ ಭಾರ ಕಳೆದುಕೊಳ್ಳುತ್ತಾ ಬಂದಿದ್ದೆ.